

## ‘ಮದುವೆಗೂ ನಟನೆಗೂ ಸಂಬಂಧವಿಲ್ಲ..’

“ನಾನೊಬ್ಬ ನಟಿ ಎನ್ನುವುದು ಮತ್ತು ನನಗೆ ಮದುವೆಯಾಗಿದೆ ಎನ್ನುವುದು ಎರಡೂ ಬೇರೆ ಬೇರೆ ಸಂಗತಿಗಳು. ನಾನು ಮತ್ತು ಸಿದ್ದಾರ್ಥ ಇಬ್ಬರೂ ಪರಸ್ಪರರನ್ನು ಗೌರವಿಸುತ್ತೇವೆ; ಹಾಗೆಯೇ ನಮ್ಮ ವೃತ್ತಿಯ ಬಗ್ಗೆಯೂ ಗೌರವವಿದೆ. ಮದುವೆಯಾದರೇನಾಯ್ತು.. ಬಿಸಿ ದೃಶ್ಯಗಳುಳ್ಳ ಹೊಸ ಚಿತ್ರ ಬಂದರೆ ಒಪ್ಪಿಕೊಳ್ಳುವುದರಲ್ಲಿ ನನಗೆ ಯಾವ ಹಿಂಜರಿಕೆಯೂ ಇಲ್ಲ..” ಎನ್ನುವುದು ವಿದ್ಯಾ ಬಾಲನ್ ನೇರ ನುಡಿ. ‘ಮದುವೆಯಾದ ಬಳಿಕ ವಿದ್ಯಾ ಬಾಲನ್ ಚುಂಬನದ ಅಥವಾ ಹಾಸಿಗೆಯ ಮೇಲಿನ ಬಿಸಿ ದೃಶ್ಯಗಳಲ್ಲಿ ಪಾಲ್ಗೊಳ್ಳಲಿಕ್ಕಿಲ್ಲ’ ಎಂಬ ಬಾಲಿವುಡ್ ಪಂಡಿತರ ಊಹೆಗಳನ್ನು ಚೆಲ್ಲಾಪಿಲ್ಲಿ ಮಾಡಿದ್ದಾಳೆ ವಿದ್ಯಾ.

‘ಇಷ್ಕಿಯಾ’ ಮತ್ತು ‘ಡರ್ಟಿ ಪಿಕ್ಚರ್’ ಎರಡರಲ್ಲೂ ವಿದ್ಯಾ ಬಿಡುಬೀಸಾಗಿ ನಟಿಸಿದ್ದಳು. ಇದೀಗ ಮದುವೆಯಾದ ಬಳಿಕದ ಆಕೆಯ ಮೊದಲ ಚಿತ್ರ ‘ಗಣಚಕ್ಕರ್’ ಚಿತ್ರೀಕರಣ ಮುಕ್ತಾಯ ಹಂತಕ್ಕೆ ಬಂದಿದೆ. ಎಲ್ಲವೂ ಅಂದು-ಕೊಂಡಂತೆ ಆದರೆ ಜೂನ್‌ನಲ್ಲಿ ಚಿತ್ರ ಬಿಡುಗಡೆ ಆಗಲಿದೆ. “ನನ್ನ ಮದುವೆಯ ಬಳಿಕ ಬಿಡುಗಡೆ ಆಗುವ ಮೊದಲ ಚಿತ್ರವಾದ್ದರಿಂದ ನನಗೂ ಇದು ವಿಶೇಷವೇ. ಈ ಕಾಮಿಡಿ ಸಿನಿಮಾದಲ್ಲಿ ಇಮ್ರಾನ್ ಹಷ್ಮಿ ಜತೆ ಸಾಕಷ್ಟು ಬೋಲ್ಡ್ ಆಗಿಯೇ ನಟಿಸಿದ್ದೇನೆ’ ಎನ್ನುತ್ತಾಳೆ ವಿದ್ಯಾ. 35ರ ಹರೆಯದ ವಿದ್ಯಾಗೆ ಈ ಚಿತ್ರದಲ್ಲಿ ಪಂಜಾಬಿ ಗೃಹಿಣಿಯ ಪಾತ್ರ.

‘ಕಹಾನಿ’ ಚಿತ್ರದ ನಟನೆಗಾಗಿ ಇದೀಗ ಫಿಲಂಫೇರ್ ‘ಅತ್ಯುತ್ತಮ ನಟಿ’ ಪ್ರಶಸ್ತಿಯನ್ನೂ ಗೆದ್ದುಕೊಂಡಿರುವ ವಿದ್ಯಾ, ಕಹಾನಿ–2 ಚಿತ್ರವನ್ನೂ ಎದುರು ನೋಡುತ್ತಿದ್ದಾಳೆ. ‘ಕಹಾನಿ ಮೊದಲ ಭಾಗದಲ್ಲಿ ಇದ್ದ ಬಹುತೇಕ ಪಾತ್ರಗಳು ಎರಡನೇ ಭಾಗದಲ್ಲೂ ಇರಲಿವೆ. ಆದರೆ ವಿದ್ಯಾ ಪಾತ್ರದಲ್ಲಿ ಹೊಸತನವಿದೆ. ಎರಡನೇ ಭಾಗ ಥ್ರಿಲ್ಲರ್ ಆಗಿರುವುದರಿಂದ ಸಾಹಸ ದೃಶ್ಯಗಳಲ್ಲೂ ವಿದ್ಯಾ ಕಾಣಿಸಿಕೊಳ್ಳಲಿದ್ದಾರೆ’ ಎನ್ನುವುದು ನಿರ್ದೇಶಕ ಸುಜಯ್ ಘೋಷ್ ನುಡಿಗಳು.

ಮೊದಲ ‘ಕಹಾನಿ’ಯಲ್ಲಿ ಹಾಡೊಂದಕ್ಕೆ ಧ್ವನಿ ನೀಡಿದ್ದ ಅಮಿತಾಭ್ ಬಚ್ಚನ್, ಎರಡನೇ ಭಾಗದಲ್ಲಿ ಪಾತ್ರವೊಂದನ್ನು ಒಪ್ಪಿಕೊಳ್ಳಲಿದ್ದಾರೆಯೆ.. ಎನ್ನುವುದಿನ್ನೂ ಖಚಿತವಾಗಿಲ್ಲ. ‘ಎರಡನೇ ಭಾಗದಲ್ಲೂ ಅಮಿತಾಭ್ ಇರಲಿದ್ದಾರೆ’ ಎನ್ನುವುದು ನಿರ್ದೇಶಕರ ಖಚಿತ ಅಭಿಪ್ರಾಯ.

## ಚೋಪ್ರಾಯಣ

ವಾತ್ಸಾಯನನ ‘ಕಾಮಸೂತ್ರ’ವನ್ನು ಆಧರಿಸಿ ರೂಪೇಶ್ ಪೌಲ್ ಎನ್ನುವಾತ ‘ಕಾಮಸೂತ್ರ ತ್ರೀ ಡಿ’ ಎನ್ನುವ ಸಿನಿಮಾವೊಂದನ್ನು ನಿರ್ಮಿಸುತ್ತಿದ್ದಾರೆ. ಬಾಲಿವುಡ್‌ನ ‘ಕಾಮದರಗಿಣಿ’ ಎಂದೇ ಖ್ಯಾತಿ ಹೊಂದಿರುವ ಶೆರ್ಲಿನ್ ಚೋಪ್ರಾ ಇದರ ನಾಯಕಿ.

ಸಿನಿಮಾದ ಇನ್ನೂ ಸೆನ್ಸಾರ್ ಆಗದ ಕೆಲವು ದೃಶ್ಯಗಳನ್ನು ಈ ಶೆರ್ಲಿನ್ ಚೋಪ್ರಾ ಇತ್ತೀಚೆಗೆ ಅಂತರ್ಜಾಲದಲ್ಲಿ ಏರಿಸಿದ್ದು, ಪಡ್ಡೆ ಹೈಕಳು ಮುಗಿಬಿದ್ದು ನೋಡುತ್ತಿದ್ದಾರಂತೆ. ಒಂದೇ ದಿನ 30 ಸಾವಿರ ಹಿಟ್‌ಗಳು ಬಂದುವಂತೆ. ಹಾಗೆಂದು ಈಕೆ ಎಲ್ಲೆಂದರಲ್ಲಿ ತಾನೇ ಪ್ರಚಾರ ಮಾಡುತ್ತಿದ್ದಾಳೆ. ನಟನೆಯ ಗಂಧ ಗಾಳಿಯೂ ಗೊತ್ತಿಲ್ಲದ ಈ ಚೋಪ್ರಾ ಲಲನೆ, ಬಾಲಿವುಡ್‌ನಲ್ಲಿ ಹೇಗಾದರೂ ಸುದ್ದಿಯಲ್ಲಿ ಇರಬೇಕೆಂದು ಬಯಸುವಾಕೆ. ತೀರಾ ಇತ್ತೀಚೆಗೆ ಟ್ವಿಟ್ಟರ್‌ನಲ್ಲಿ ತಾನು ಹಣಕ್ಕಾಗಿ ಹಲವರ ಜತೆ ಮಲಗಿದವಳು ಎಂದೂ ಈಕೆ ಪ್ರಚಾರ ಮಾಡಿಕೊಂಡಿದ್ದಳು.

